ಸಾಕ್ಷಿಯನ್ನು ದಿನಾಂಕ **17-11-2025** ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯ ಪರವಾಗಿ ಶ್ರೀ ಎಸ್.ಎನ್. ವಕೀಲರಿಂದಃ

ಈ ದಾವೆಗೆ ಸಂಬಂಧಿಸಿದಂತೆ ದಿನಾಂಕ 11-01-2024 ರಂದು ನಾನು ಪ್ರತಿವಾದಿಗೆ ಸುಳ್ಯದ ವಕೀಲರಾದ ಡಿ.ಸುಬ್ರಾಯ ಭಟ್ ವಕೀಲರ ಮೂಲಕ ನೋಟೀಸನ್ನು ನೀಡಿರುತ್ತೇನೆ. ಸದರಿ ನೋಟೀಸನ್ನು ನಾನು ಈಗ ನ್ಯಾಯಾಲಯದಲ್ಲಿ ನೋಡಿ ಒಪ್ಪಿದ್ದು ಅದನ್ನು **ನಿಡಿ-2** ಎಂದು ಗುರುತಿಸಲಾಗಿದೆ. ನಿಡಿ-2 ರ ನೋಟೀಸಿಗೆ ನಿಡಿ-1 ರಂತೆ ಪ್ರತಿವಾದಿ ಪ್ರತ್ಯುತ್ತರವನ್ನು ನೀಡಿರುತ್ತಾರೆ ಎಂದರೆ ಸರಿ. ನಿಡಿ-2 ರ ನೋಟೀಸಿನಲ್ಲಿ ಪ್ರಸ್ತುತ ದಾವೆಯಲ್ಲಿ ಹಾಜರಿಸಿದ ಚೆಕ್ಕನ್ನು ದಿನಾಂಕ 26-01-2021 ರ ಕರಾರಿನೊಂದಿಗೆ ನಾನು ಪ್ರತಿವಾದಿಯಿಂದ ಪಡೆದುಕೊಂಡಿರುತ್ತೇನೆ. ಸದರಿ ಚೆಕ್ಕನ್ನು ನಾನು ನಗದೀಕರಣಕ್ಕಾಗಿ ಬ್ಯಾಂಕ್‌ಗೆ ಹಾಜರುಪಡಿಸಿರುತ್ತೇನೆ. ನಿಡಿ-2 ರ ನೋಟೀಸಿನಲ್ಲಿ ನಾನು ಸದರಿ ಚೆಕ್ಕನ್ನು

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ನಗದೀಕರಣಕ್ಕಾಗಿ ಹಾಜರುಪಡಿಸಿರುವುದಿಲ್ಲ ಎಂದು ಹೇಳಿರುತ್ತೇನೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ.

ನಾನು ಇದೇ ನ್ಯಾಯಾಲಯದಲ್ಲಿ ಒಟ್ಟು ಎರಡು ಚೆಕ್ ಅಮಾನ್ಯ ಪ್ರಕರಣಗಳನ್ನು ದಾಖಲಿಸಿರುತ್ತೇನೆ. ನಾನು ಬಡ್ಡಿಗೆ ಯಾರಿಗೂ ಸಾಲವನ್ನು ನೀಡಿರುವುದಿಲ್ಲ. ನಾನು ಆದಾಯ ತೆರಿಗೆ ಪಾವತಿದಾರನಲ್ಲ.

ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸುರಕ್ಷಾ ಹಾರ್ಡ್ ವೇರ್ಸ್ ಅ್ಯಂಡ್ ಪೈಂಟ್ಸ್ ನನ್ನ ಮಗನಿಗೆ ಸೇರಿದ್ದಾಗಿರುತ್ತದೆ. ನಿಡಿ–2 ರ ನೋಟೀಸಿಗೆ ಪ್ರತಿವಾದಿಯ ನೀಡಿದ ನಿಡಿ–1 ರ ಉತ್ತರವನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ನಿಡಿ–1 ರಲ್ಲಿರುವ ವಿಚಾರಗಳು ಸತ್ಯವಾಗಿರುತ್ತದೋ–ಇಲ್ಲವೋ ಎಂದು ನನಗೆ ತಿಳಿದಿರುವುದಿಲ್ಲ.

ನಾನು ಹಾಗೂ ಪ್ರತಿವಾದಿಯು ಬೆಳ್ಳಾರೆಯ ರೋಟರಿ ಕ್ಲಬ್‌ನಲ್ಲಿ ಸದಸ್ಯರಾಗಿರುತ್ತೇವೆ. ಆ ಸಮಯದಲ್ಲಿ ನನ್ನ ಹಾಗೂ ಪ್ರತಿವಾದಿಯ ನಡುವೆ ಭಿನ್ನಾಭಿಪ್ರಾಯ ಮೂಡಿ, ಪತ್ರಿಕೆಯಲ್ಲಿ ಸದಸ್ಯತನ ರದ್ದುಗೊಂಡ ಬಗ್ಗೆ ಪ್ರಕಟಣೆಯು ಬಂದಿರುತ್ತದೆ ಎಂದರೆ ನನಗೆ ಆ ಬಗ್ಗೆ ತಿಳಿದಿರುವುದಿಲ್ಲ. ಸಾಕ್ಷಿ ಮುಂದುವರೆದು ನಾನು ಸದರಿ ರೋಟರಿ ಕ್ಲಬ್‌ನ್ನು ಈ ಹಿಂದೆಯೇ ಬಿಟ್ಟು ಬಂದಿರುತ್ತೇನೆಂದು ನುಡಿಯುತ್ತಾರೆ.

ನಾನು ಈ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ನಿಪಿ–6 ರ ಕರಾರು ನನ್ನ ವಕೀಲರ ಬಳಿಯಿತ್ತು. ನಿಪಿ–3 ರ ದಾಖಲೆಯಲ್ಲಿ ನಾನು ಚೆಕ್ಕನ್ನು ನಗದೀಕರಣಕ್ಕಾಗಿ

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ಹಾಜರುಪಡಿಸಿರುವುದಿಲ್ಲವೆಂದು ಉಲ್ಲೇಖ ಇರುತ್ತದೆಂದರೆ ಸರಿಯಲ್ಲ. ನಾನು ಸುಳ್ಯದ ಹೆಚ್.ಡಿ.ಎಫ್.ಸಿ. ಬ್ಯಾಂಕ್ ಗೆ ಸದರಿ ಚೆಕ್ಕನ್ನು ನಗದೀಕರಣಕ್ಕಾಗಿ ಹಾಜರುಪಡಿಸಿರುತ್ತೇನೆ. ನಾನು ಹಾಜರುಪಡಿಸಿದ ನಿಪಿ-1 ರ ಚೆಕ್ ಸಿಂಡಿಕೇಟ್ ಬ್ಯಾಂಕ್‌ಗೆ ಸಂಬಂಧಿಸಿದ್ದಾಗಿದ್ದು, ಸದರಿ ಬ್ಯಾಂಕ್‌ಗೆ ನಾನು ನಗದೀಕರಣಕ್ಕಾಗಿ ಹಾಜರುಪಡಿಸಿದ್ದು, ಆ ಬಾಬ್ತು ಸದರಿ ಬ್ಯಾಂಕ್ ನವರು ನನಗೆ ಹಿಂಬರಹವನ್ನು ನೀಡಿರುತ್ತಾರೆ.

ನಿಪಿ-6 ರಲ್ಲಿರುವ ಸಹಿಯು ಪ್ರತಿವಾದಿಯದ್ದಲ್ಲ ಎಂದರೆ ಸರಿಯಲ್ಲ. ನಿಪಿ-6 ರಲ್ಲಿ ಕಂಡು ಬರುವ ಸಾಕ್ಷಿದಾರರು ನನ್ನ ಕಡೆಯವರಾಗಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-6 ರಲ್ಲಿರುವ ಸಾಕ್ಷಿದಾರರನ್ನು ಈ ದಾವೆಯಲ್ಲಿ ಸಾಕ್ಷಿದಾರರಾಗಿ ಮಾಡಬಹುದು. ನಿಪಿ-6 ರ ದಾಖಲೆಯು ಸೃಷ್ಟೀಕೃತ ದಾಖಲೆ ಎಂದರೆ ಸರಿಯಲ್ಲ. ಪ್ರತಿವಾದಿಯು ನನ್ನಿಂದ ಯಾವುದೇ ಸಾಲವನ್ನು ಪಡೆದುಕೊಂಡದ್ದಿಲ್ಲ ಎಂದರೆ ಸರಿಯಲ್ಲ. ರೋಟರಿ ಕ್ಲಬ್ ನಲ್ಲಿ ಆದ ಘಟನೆಯ ಪರಿಣಾಮವಾಗಿ ನಾನು ಪ್ರತಿವಾದಿಯ ವಿರುದ್ಧ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ರೋಟರಿ ಕ್ಲಬ್‌ನಲ್ಲಿ ಆದ ಘಟನೆಯ ವಿಚಾರವಾಗಿ 2020 ರ ಜುಲೈ ತಿಂಗಳಲ್ಲಿ ಸುದ್ದಿ ಬಿಡುಗಡೆ ವಾರ ಪತ್ರಿಕೆಯಲ್ಲಿ ವರದಿಯಾಗಿರುತ್ತದೆ ಎಂದರೆ ನನಗೆ ತಿಳಿದಿರುವುದಿಲ್ಲ. ಬೆಳ್ಳಾರೆಯ ರೋಟರಿ ಕ್ಲಬ್ ನಲ್ಲಿರುವ ನನ್ನ ಸದಸ್ಯತನವನ್ನು ಪ್ರತಿವಾದಿಯು ರದ್ದುಗೊಳಿಸಿರುತ್ತಾರೆಂಬ ದ್ವೇಷದಿಂದ ನಾನು ಪ್ರತಿವಾದಿಂಹು ವಿರುದ್ಧ ಈ ದಾವೆಯನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ.

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ದಿನಾಂಕ 26-01-2021 ರ ನಂತರ ನನ್ನ ಹಾಗೂ ಪ್ರತಿವಾದಿಯ ನಡುವೆ ಯಾವುದೇ ಹಣದ ವ್ಯವಹಾರ ಆಗಿರುವುದಿಲ್ಲ ಎಂದರೆ ಸರಿ. ದಿನಾಂಕ 26-01-2021 ರ ನಂತರ ಯಾವುದೇ ಕಾಗದ ಪತ್ರವಾಗಲೀ, ದಾಖಲೆ ಪತ್ರವನ್ನಾಗಲೀ ನಾನು ಹಾಗೂ ಪ್ರತಿವಾದಿಯು ಅದಲು-ಬದಲಿ ಮಾಡಿಕೊಂಡಿರುವುದಿಲ್ಲ ಎಂದರೆ ಸರಿ. ದಿನಾಂಕ 26-01-2021 ರಂದು ನಾನು ಪ್ರತಿವಾದಿಗೆ ಯಾವುದೇ ಸಾಲವನ್ನು ನೀಡಿದ್ದಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ನೀಡಿದ ಸಾಲದ ಕುರಿತು ಬ್ಯಾಂಕ್‌ನಿಂದ ಹಣವನ್ನು ವಿತ್ ಡ್ರಾ ಮಾಡಿದ ಬಗ್ಗೆ ದಾಖಲೆಯು ಇದೆಯಾ ಎಂದರೆ ಸಾಕ್ಷಿಯು ನಾನು ಅಡಿಕೆ ಕೃಷಿಯನ್ನು ಹೊಂದಿದ್ದು, ಅಡಿಕೆಯನ್ನು ಮಾರಾಟ ಮಾಡಿದ ಬಾಬ್ತು ಬಂದ ಉಳಿತಾಯದ ಹಣ ಹಾಗೂ ನನ್ನ ಮಗನ ವ್ಯಾಪಾರದಿಂದ ಬಂದ ಹಣವು ಇದ್ದು, ಸದರಿ ಹಣಗಳನ್ನು ಪ್ರತಿವಾದಿಗೆ ಸಾಲವಾಗಿ ನೀಡಿರುತ್ತೇನೆ. ರೂ.2,00,000/-ಕ್ಕಿಂತ ಹೆಚ್ಚಿನ ಹಣವನ್ನು ನಗದು ರೂಪದಲ್ಲಿ ವ್ಯವಹಾರ ಮಾಡಬಾರದು ಎಂದರೆ ಸರಿಯಲ್ಲ. ರೂ.2,00,000/-ಕ್ಕಿಂತ ಹೆಚ್ಚಿನ ಹಣವನ್ನು ನಗದು ರೂಪದಲ್ಲಿ ವ್ಯವಹಾರ ಮಾಡಿದರೆ ಅದು ಆರ್ಥಿಕ ಅಪರಾಧವಾಗುತ್ತದೆ ಎಂದರೆ ನನಗೆ ಅದರ ಬಗ್ಗೆ ತಿಳಿದಿರುವುದಿಲ್ಲ.

ನಿಖರವಾಗಿ ಅಡಿಕೆ ಮಾರಾಟದಿಂದ ಎಷ್ಟು ಹಣವನ್ನು ಹಾಗೂ ನನ್ನ ಮಗನ bussiness ನಿಂದ ಎಷ್ಟು ಹಣವನ್ನು ಕ್ರೋಢೀಕರಿಸಿದ್ದೀರಿ ಎಂದರೆ ನನಗೆ ಅದರ ಬಗ್ಗೆ ನಿಖರವಾಗಿ ತಿಳಿದಿರುವುದಿಲ್ಲ. ಪ್ರತಿವಾದಿಯು ನನಗೆ ಯಾವುದೇ ಹಣವನ್ನು ಪಾವತಿಸಲು

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ಬಾಕಿ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ರ ಚೆಕ್ಕು ಅವಧಿ ಬಾಧಕವಾದ ಚೆಕ್ ಎಂದರೆ ಸರಿ. ಪ್ರತಿವಾದಿಯಿಂದ ನನಗೆ ಯಾವುದೇ ಹಣವು ಬರಲು ಬಾಕಿ ಇಲ್ಲದೇ ಇದ್ದದ್ದರಿಂದ ನಾನು ನಿಪಿ-1 ರ ಚೆಕ್ಕನ್ನು ನಗದೀಕರಣಕ್ಕಾಗಿ ಬ್ಯಾಂಕಿಗೆ ನಿಗಧಿತ ಅವಧಿಯೊಳಗೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಗೂ ಪ್ರತಿವಾದಿಯು ಸ್ನೇಹಿತರಾಗಿದ್ದ ಸಮಯದಲ್ಲಿ ಪ್ರತಿವಾದಿಯ ನಿಪಿ-1 ರ ಚೆಕ್ಕನ್ನು ದುರುಪಯೋಗಪಡಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ನಾನು ಬೆಳ್ಳಾರೆ ರೋಟರಿ ಕ್ಲಬ್ ನ ಸದಸ್ಯತನ ಬಿಟ್ಟ ನಂತರ ನನಗೆ ಪ್ರತಿವಾದಿಯೊಂದಿಗೆ ಯಾವುದೇ ಮಾತುಕತೆ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯೊಂದಿಗೆ ದುರ್ಲಾಭ ಹೊಂದುವ ಉದ್ದೇಶದಿಂದ ಸುಳ್ಳು ಸಾಧನೆ ಮಾಡುತ್ತಿದ್ದೇನೆಂದರೆ ಸರಿಯಲ್ಲ. ನಿಪಿ-6 ರ ದಾಖಲೆಯನ್ನು ಸುಳ್ಯದ ಶ್ರೀ ನಾರಾಯಣ ಕೆ. ವಕೀಲರ ಬಳಿ ಮಾಡಿಸಿರುತ್ತೇನೆ. ಸದರಿ ದಾಖಲೆಯನ್ನು ಮಾಡಲು ಮಾಹಿತಿಯನ್ನು ಪ್ರತಿವಾದಿಯರೇ ವಕೀಲರಿಗೆ ನೀಡಿರುತ್ತಾರೆ. ಅಂತಹ ಕರಾರು ನನ್ನ ಹಾಗೂ ಪ್ರತಿವಾದಿಯ ನಡುವೆ ನಡೆದಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ.**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ ಇದೆ ಎಂದು ಒಪ್ಪಿರುತ್ತಾರೆ.

ಸಾಕ್ಷಿಯ ಸಹಿ

ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಸುಳ್ಯ.ದ.ಕ.

ಸಾಕ್ಷಿಯ ಸಹಿ

ನ್ಯಾಯಾಧೀಶರ ಸಹಿ

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ